ಅಸಲಿ ನೆನಪುಗಳನ್ನು ಬದುಕುವುದು ಸಾಧ್ಯವಾಗಿದೆ. ನಾವೀಗ ಬದುಕುತ್ತಿರುವ ಸಂದರ್ಭವು ಮಕ್ಕಳನ್ನು ಮಕ್ಕಳಾಗಿರಲು ಬಿಡಲೊಪ್ಪದ ಮನಸ್ಥಿತಿಯದಾಗಿ ವಕ್ಕರಿಸಿದೆ. ಆಧುನಿಕತೆ ಎಂಬುದನ್ನು, ಸಮಾನತೆ, ಸಹಬಾಳ್ವೆ, ಸಹಕಾರ, ಸಹನೆ ಮುಂತಾದ ಪ್ರೀತಿ ತತ್ವಗಳನ್ನು ಬಾಳಬೇಕಾದ ವಿವೇಕ ಎಂಬ ಅರ್ಥದಲ್ಲಿ ಗ್ರಹಿಸಬೇಕಾಗಿತ್ತು. ಆದರೆ ಈಗ ಆಗಿರುವುದೇ ಬೇರೆ. ಈ ವಿರೋಧಾಭಾಸವನ್ನು ಮೀರಲಿಕ್ಕಾಗಿ, ಮಕ್ಕಳಿಗೆ ಎಂದಿಗಿಂತಲೂ ಇಂದು ಮಣ್ಣಿನ ಆಟಗಳು, ನೀರಿನ ಪಾಠಗಳು ಬೇಕಾಗಿವೆ.

◆ **ಬರೆಯುವುದು ಎಷ್ಟು ಮುಖ್ಯವೋ ಅದನ್ನು ಓದಬೇಕಾದವರಿಗೆ ಖುದ್ದು ಮುಟ್ಟಿಸುವುದೂ ಮುಖ್ಯ. ಈ ಕುರಿತು ನೀವು ಮಾಡಿದ ಕೆಲಸ ತುಂಬಾ ದೊಡ್ಡದು. ನೀವೇ ಏಕತಾರಿ ಹಿಡಿದು ಗುಂಗಿನಲ್ಲಿ ಹಾಡುತ್ತಾ, ಅಲೆಮಾರಿಯಂತೆ ಅನುಭವ ದಾಟಿಸುತ್ತಾ ಅಡ್ಡಾಡುವುದು ಸಾಹಿತ್ಯ ಪರಿಚಾರಿಕೆಯ ಇನ್ನೊಂದು ಮಗ್ಗುಲಿನಂತಿದೆ. ಇದು ಸಾಧ್ಯ ಅಥವಾ ಅಗತ್ಯ ಅನಿಸಿದ್ದು ಹೇಗೆ?**

ಕವಿಗಳು ಬರೆಯುತ್ತಿದ್ದರು. ಆ ಕಾವ್ಯವನ್ನು ರಾಜರು ಅಥವಾ ಆ ಕವಿಯ ಧರ್ಮದ ವರ್ತಕ ಶ್ರೀಮಂತರು ಪ್ರತಿ ಮಾಡಿಸಿ ಹಂಚುತ್ತಿದ್ದರು. ಅದು ರಾಜತ್ವವನ್ನು ಬಲಗೊಳಿಸುವ ಕೆಲಸವಾಗಿತ್ತು. ನಮ್ಮದೀಗ ಪ್ರಜಾಪ್ರಭುತ್ವವನ್ನು ಬಲಗೊಳಿಸಬೇಕಾದ ಕಾಯಕ. ಆದ್ದರಿಂದ ನಮ್ಮ ಬರಹಗಳನ್ನು ಸಾವಿರ ಬಗೆಗಳಲ್ಲಿ ಸಮುದಾಯಗಳಿಗೆ ತಲುಪಿಸಬೇಕಾಗಿದೆ. ಈಗಲೂ ಮುಜುಗರಲೇಪಿತ ಲೇಖಕರು ತಾವು ಬರೆದ ಪುಸ್ತಕಗಳನ್ನು ತಮ್ಮ ಬ್ಯಾಗಿನಿಂದ ಈಚೆ ತೆಗೆಯಲೂ ಹಿಂಜರಿಯುತ್ತಾರೆ. ಈ ಮುಜುಗರಕ್ಕೆ ಕಾರಣ, ಬಹುತೇಕ ತಿಂಗಳ ಸಂಬಳವೆಂದೇ ನನ್ನ ಖಚಿತ ಅಭಿಪ್ರಾಯ. ಆದರೀಗ ಕನ್ನಡದ ಲೇಖಕರಿಗೂ ಜ್ಞಾನೋದಯವಾಗಿದೆ. ಈ ಅರಿವಿಗೆ ಇಂಗ್ಲಿಷ್ ಲೇಖಕರ ಬುಕ್ ಲಾಂಚಿಂಗ್ ಅರ್ಥಾತ್ ಪುಸ್ತಕ ಮಾರಾಟ ಕಾರ್ಯಕ್ರಮಗಳೇ ಪ್ರೇರಣೆ. ಇರಲಿ, ಒಳ್ಳೆಯ ಬೆಳವಣಿಗೆಯೇ. ನಾನು ಮತ್ತು ನಮ್ಮ ಸ್ನೇಹಿತರುಗಳು, ಈಗ್ಗೆ ಮೂವತ್ತು ವರ್ಷಗಳ ಹಿಂದೆ ನಮ್ಮ ಪ್ರಕಾಶನದ ಪುಸ್ತಕಗಳ ಜೊತೆಗೆ 'ನ್ಯಾಷನಲ್ ಬುಕ್ ಟ್ರಸ್ಟ್' ಮತ್ತಿತರ ಪ್ರಕಾಶನಗಳ ಪುಸ್ತಕಗಳನ್ನು ನೂಕುವ ಗಾಡಿಗಳಲ್ಲಿಟ್ಟು ಬೀದಿ ಬೀದಿಗಳಲ್ಲಿ–

**ಕಲ್ಲು ಸಕ್ಕರೆ ಕೊಳ್ಳಿರೋ ಒಳ್ಳೆ ಪುಸ್ತಕ ಕೊಳ್ಳಿರೋ**
**ದುಡ್ಡ ದಡ್ಡರ ಆಸೆ ಪುಸ್ತಕ ಜಾಣರ ಆಸೆ**
**ದಡ್ಡರ ಕೊಟ್ಟು ಜಾಣರ ಪಡೆಯಿರಿ**

ಎಂದು ಹಾಡುತ್ತಾ ಮಾರಾಟ ಮಾಡಿದ್ದೇವೆ. ನಮ್ಮ ಪ್ರಕಾಶನದ ಪ್ರತಿ ಪುಸ್ತಕಗಳನ್ನು, ಓದುಗಸ್ನೇಹಿ ಬೆಲೆಯಲ್ಲಿ ಕನಿಷ್ಠ ಮೂರು ಸಾವಿರ ಪ್ರತಿಗಳನ್ನು ನಾನು ವೈಯಕ್ತಿಕವಾಗಿ ಬಸ್ಸು-ಟ್ರೈನುಗಳಲ್ಲಿ ಮಾರಾಟ ಮಾಡುತ್ತಾ ಬಂದಿರುವೆ. ಶವಸಂಸ್ಕಾರ ಸಂದರ್ಭ ಹೊರತುಪಡಿಸಿ ಎಲ್ಲೆಡೆಯೂ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಾಡುತ್ತಾ ಬಂದಿರುವೆ. ಪುಸ್ತಕ ಚಳವಳಿಯ ಪ್ರೀತಿ-ಸಂತೋಷ ಅರ್ಥವಾಗದವರು ಗೇಲಿ ಮಾಡಿದರು, ಈಗ ಅವರೂ ಬದಲಾಗಿದ್ದಾರೆ. ತರುಣ ತರುಣಿ ಬರಹಗಾರರಂತೂ ಉತ್ಸಾಹದಿಂದ ತಮ್ಮ ಪುಸ್ತಕಗಳನ್ನು ಓದುಪ್ರಿಯರಿಗೆ ತಲುಪಿಸುತ್ತಿದ್ದಾರೆ. ನಾನು ಕೆಲಸ ಮಾಡಿದ ಎಲ್ಲಾ ಕಾಲೇಜುಗಳಲ್ಲಿ, ನಿರಂತರವಾಗಿ ವಿವಿಧ ಪ್ರಕಾಶಕರನ್ನು ಕರೆಸಿ ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸುತ್ತಾ ಸಾಗಿ ಬಂದಿರುವೆ. ಇದಕ್ಕೆ ಬೆಂಬಲವೆಂಬಂತೆ, ನಾನು ಪ್ರಿನ್ಸಿಪಾಲ್ ಆಗಿದ್ದಾಗ ವಿದ್ಯಾರ್ಥಿಗಳಿಗೆ 'ವಿಶೇಷ ಓದು' ತರಗತಿಗಳನ್ನು ಏರ್ಪಡಿಸಲು ಅಧ್ಯಾಪಕರಿಗೆ ಒತ್ತಾಸೆಯಾಗಿ ನಿಂತದ್ದನ್ನು ನೆನೆಯುತ್ತೇನೆ. ನನ್ನ ಕಾಲೇಜುಗಳ ಸುತ್ತಮುತ್ತ ಶಾಲೆಗಳಲ್ಲಿ ನಿರಂತರವಾಗಿ ಹಾಡು-ಕಥೆಗಳ ಸಂಗದಲ್ಲಿ ಪುಸ್ತಕ ಹಂಚುವ ಕೆಲಸ ನನಗೆ ಅಪಾರ ಸಂತಸ ನೀಡಿದೆ. ಈ ಕೆಲಸದಲ್ಲಿ ಸುಸ್ತೆಂಬುದೇ ಇಲ್ಲ. ಈ ನಿಟ್ಟಿನಲ್ಲಿ ಏಕತಾರಿ ನನಗೆ ದೊಡ್ಡ ಸಂಗಾತಿಯಾಗಿ ಜೀವ ಕೊಟ್ಟಿದೆ ಎಂಬುದನ್ನು ಹೇಳಲೇಬೇಕು.

◆ **ಮಕ್ಕಳ ಸಾಹಿತ್ಯದ ಗ್ರಹಿಕೆಗಳು ವಿಶ್ವದಾದ್ಯಂತ ಭಿನ್ನ ಬಗೆಯಾಗಿ ಕಂಡರೂ ಬಾಲ್ಯವನ್ನು ಆಧರಿಸಿಕೊಂಡೇ ವಿಶೇಷವೆನ್ನಿಸುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ನಿಮ್ಮ ಸಾಹಿತ್ಯ ಮಕ್ಕಳಿಗೆ ನಿಮ್ಮೊಳಗಿನ ಜ್ಞಾನ ಮುಟ್ಟಿಸುವಲ್ಲಿ ಸಕ್ರಿಯವಾಗುತ್ತದೆ. ಪಂಚತಂತ್ರವು ರಾಜಕುಮಾರರಿಗೆ ವ್ಯವಹಾರಿಕ ಜ್ಞಾನ ಮುಟ್ಟಿಸುವ ಕಥೆಗಳನ್ನು ಆಯ್ದುಕೊಂಡ ಹಾಗೆ, ನೀತಿ ಕಥೆಗಳು ಮೌಲ್ಯಗಳನ್ನು ಮಕ್ಕಳಲ್ಲಿ ರೂಢಿಸಲು ಸೃಷ್ಟಿಸಿಕೊಂಡಂತೆ, ನೀವು ಕೃಷಿ ಹಸುರಿನ ಜ್ಞಾನ**